ರಾಜ್ಯದಲ್ಲಿ ಎಸ್.ಎಸ್.ಎಲ್.ಸಿ ಫಲಿತಾಂಶವನ್ನು ಸುಧಾರಿಸುವುದು

4114 (4709) : ಶ್ರೀ ಸಭಾಪತಿ ಯು.ಆರ್. (ಉಡುಪಿ) : ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಸರ್ಕಾರಿ ಪ್ರೌಢಶಾಲೆಗಳಲ್ಲಿ ಕಳೆದ 2000–01, 2001–02, 2002–03ರ ಶೈಕ್ಷಣಿಕ ವರ್ಷಗಳಲ್ಲಿ ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ಬಂದಿರುವ ಶೇಕಡಾವಾರು ಫಲಿತಾಂಶಗಳ ಜಿಲ್ಲಾವಾರು ವಿವರ ನೀಡುವುದು;

ಆ) ಸರ್ಕಾರಿ ಶಾಲೆಗಳಲ್ಲಿ ಶಿಕ್ಷಣ ಮಟ್ಟವನ್ನು ಸುಧಾರಿಸಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು?

ಪ್ರೊ। ಬಿ.ಕೆ. ಚಂದ್ರಶೇಖರ್ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ರಾಜ್ಯ ಸಚಿವರು):

ಅ) 2000–01, 2001–02, 2002–03ರ ಸಾಲಿನ ಮೂರು ವರ್ಷದ ಶೇಕಡಾವಾರು ಫಲಿತಾಂಶವನ್ನೊಳಗೊಂಡ ಜಿಲ್ಲಾವಾರು ಮಾಹಿತಿ ಅನುಬಂಧದಲ್ಲಿ ನೀಡಲಾಗಿದೆ.

ಆ) ಮೆರಿಟ್ ಆಧಾರದ ಮೇಲೆ ಶಿಕ್ಷಕರ ನೇಮಕಾತಿ ಮಾಡಲಾಗುತ್ತಿರುವುದರಿಂದ, ಅಲ್ಲದೇ ನೇಮಕಾತಿಗೊಂಡ ಶಿಕ್ಷಕರಿಗೆ ಸೂಕ್ತ ತರಬೇತಿ ನೀಡುತ್ತಿರುವುದರಿಂದ ಶಿಕ್ಷಣ ಗುಣಮಟ್ಟವನ್ನು ಸುಧಾರಿಸುವಲ್ಲಿ ಸಹಾಯಕಾರಿಯಾಗುತ್ತದೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 4709ಕ್ಕೆ ಅನುಬಂಧ

ಕ್ರ.ಸ	ಜಿಲ್ಲೆ	2000–01	2001–02	2002–03
1	ಬೆಂಗಳೂರು ಉತ್ತರ	55.91	32.69	37.46
2	ಬೆಂಗಳೂರು ದಕ್ಷಿಣ	50.27	29.32	61.63
3	ಬೆಂಗಳೂರು ಗ್ರಾಮಾಂತರ	28.75	41.37	46.85
4	ಚಿಕ್ಕಬಳ್ಳಾಪುರ	–	33.56	37.29
5	ಕೋಲಾರ	33.08	31.64	34.02
6	ಮಧುಗಿರಿ	–	40.28	31.23
7	ತುಮಕೂರು	42.07	48.78	56.70
8	ಚಾಮರಾಜನಗರ	43.78	33.00	44.35
9	ಮೈಸೂರು	39.33	41.29	43.22
10	ಮಂಡ್ಯ	43.10	43.74	52.69
11	ಉಡುಪಿ	62.60	68.96	68.60
12	ಮಂಗಳೂರು	56.17	66.34	64.27
13	ಕೊಡಗು	41.09	48.53	43.63
14	ದಾವಣಗೆರೆ	39.22	38.00	38.48
15	ಚಿತ್ರದುರ್ಗ	42.56	29.63	44.99
16	ಚಿಕ್ಕಮಗಳೂರು	44.35	48.13	60.73
17	ಶಿವಮೊಗ್ಗ	43.51	52.60	57.17

ಕ್ರ.ಸ	ಜಿಲ್ಲೆ	2000–01	2001–02	2002–03
18	ಹಾಸನ	39.58	41.21	49.74
19	ಹಾವೇರಿ	45.47	46.41	57.84
20	ಗದಗ	39.21	35.67	45.88
21	ಧಾರವಾಡ	54.15	39.96	58.48
22	ಚಿಕ್ಕೋಡಿ	–	49.63	71.33
23	ಬೆಳಗಾಂ	49.85	43.37	56.62
24	ಬಾಗಲಕೋಟೆ	51.39	44.00	52.80
25	ಬಿಜಾಪುರ	55.39	43.49	47.10
26	ಕಾರವಾರ	52.28	65.34	70.13
27	ಯಾದಗಿರ್	–	25.06	41.93
28	ಗುಲ್ಬರ್ಗಾ	24.04	24.54	39.62
29	ಕೊಪ್ಪಳ	30.13	26.28	42.78
30	ರಾಯಚೂರು	43.86	32.82	42.18
31	ಬೀದರ್	44.45	38.82	45.99
32	ಬಳ್ಳಾರಿ	54.50	32.88	47.65

ರಾಜ್ಯದಲ್ಲಿ ಶಿಕ್ಷಕಿಯರ ಸಂಘಟನೆಗೆ ಮಾನ್ಯತೆ

4115 (4711) : ಶ್ರೀ ಸಭಾಪತಿ ಯು.ಆರ್. (ಉಡುಪಿ) : ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿ ಅಸ್ತಿತ್ವಕ್ಕೆ ಬಂದಿರುವ ಶಿಕ್ಷಕಿಯರ ಸಂಘಟನೆಗೆ ಸರ್ಕಾರ ಇನ್ನೂ ಮಾನ್ಯತೆ ನೀಡದಿರುವುದು ನಿಜವೇ;

ಆ) ಮಹಿಳೆಯರಿಗೆ ಆದ್ಯತೆ ನೀಡುವ ಸಲುವಾಗಿ ಶಿಕ್ಷಕ ಹುದ್ದೆಯಲ್ಲಿರುವ ಶೇ.75 ಶಿಕ್ಷಕಿಯರಿಗೆ ಅವರದೇ ಆದ ಸಂಘಟನೆ ಕಟ್ಟಲು ಅವಕಾಶ ಇಲ್ಲವೇ;

ಇ) ಈ ಬಗ್ಗೆ ಸರ್ಕಾರದ ನಿಲುವೇನು?

ಪ್ರೊ। ಬಿ.ಕೆ. ಚಂದ್ರಶೇಖರ್ (ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ರಾಜ್ಯ ಸಚಿವರು):

ಅ) ಹೌದು

ಆ) ರಾಜ್ಯದಲ್ಲಿ ಪ್ರಾಥಮಿಕ ಶಾಲಾ ಶಿಕ್ಷಕ ಶಿಕ್ಷಕಿರಯನ್ನು ಒಳಗೊಂಡ ಮಾನ್ಯತೆ ಪಡೆದ ಸಂಘವು ಇರುತ್ತದೆ.

ಇ) ಪ್ರಾಥಮಿಕ ಶಾಲಾ ಶಿಕ್ಷಕ ವೃಂದದ ಎರಡನೇ ಸಂಘಕ್ಕೆ ಮಾನ್ಯತೆ ಮಾಡುವ ಅವಶ್ಯಕತೆ ಇರುವುದಿಲ್ಲ.

ಉಡುಪಿ ಜಿಲ್ಲೆಯಲ್ಲಿ ಏಡ್ಸ್ ಮತ್ತು ಮಲೇರಿಯಾ ರೋಗಗಳು ಹೆಚ್ಚಾಗಿರುವುದು

4116 (4712) : ಶ್ರೀ ಸಭಾಪತಿ ಯು.ಆರ್. (ಉಡುಪಿ) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?